<u>ದಿಃ **08-02-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ ಟಿ ಬಿ ರವರಿಂದಃ</u>

1. ಈ ದಿನ ಪ್ರತಿವಾದಿ ನಂ.2 ರವರು ನನಗೆ ನ್ಯಾಯಾಲಯಕ್ಕೆ ತಮ್ಮ ಪರವಾಗಿ ಸಾಕ್ಷಿ ಹೇಳಲು ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ನನ್ನನ್ನು ಈ ದಾವೆಯಲ್ಲಿ ಪ್ರತಿವಾದಿ ನಂ.7 ಎಂದು ವಾದಿ ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿ. ನಾನು ಈ ದಾವೆಯಲ್ಲಿ ನನ್ನ ವಕೀಲರ ಮೂಲಕ ಹಾಜರಾಗಿ ಯಾವುದೇ ಪ್ರತಿವಾದ ಪತ್ರ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಈ ದಾವೆಯ ಸಮನ್ಸು ನನಗೆ ಜಾರಿಯಾಗಿದ್ದವು ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಮಲ್ಲಪ್ಪ ಎಂದರೆ ಸರಿ. ಮಲ್ಲಪ್ಪನಿಗೆ ಬಸವಣ್ಣಿ ಮತ್ತು ಬಾಳಪ್ಪ ಎನ್ನುವ ಸಹೋದರರು ಇದ್ದರು ಎಂದರೆ ಸರಿ. ನನ್ನ ತಂದೆ ಹಾಗೂ ಆತನ ಸಹೋದರರು ಈಗ ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ತಾಯಿ, ನನ್ನ ದೊಡ್ಡಮ್ಮಂದಿರರು ಮೃತರಾಗಿರುತ್ತಾರೆ ಎಂದರೆ ಸರಿ. ನನ್ನ ದೊಡ್ಡಪ್ಪ ಬಸವಣ್ಣಿರವರಿಗೆ ಪ್ರತಿವಾದಿ ನಂ.1 ರಿಂದ 4 ಹಾಗೂ ವಾದಿ ಮಕ್ಕಳು ಎಂದರೆ ಸರಿ. ಅದರಂತೆ ಇನ್ನೊಬ್ಬ ದೊಡ್ಡಪ್ಪ ಮೃತ ಬಾಳಪ್ಪ ರವರಿಗೆ ಪ್ರತಿವಾದಿ ನಂ.5 ಮತ್ತು 6 ರವರು ಮಕ್ಕಳು ಎಂದರೆ ಸರಿ.

2. ವಾದಿ ಮತ್ತು ಪ್ರತಿವಾದಿ ನಂ.1 ರಿಂದ 7 ರವರು ಇಲ್ಲಿಯವರೆಗೆ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ಅಜ್ಜ ಬಸವಂತೆಪ್ಪರವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನನ್ನ ಅಜ್ಜ ಬಸವಂತೆಪ್ಪ ಮೃತರಾದ ನಂತರ ವಾರಸಾ ನಾತೆಯಿಂದ ನನ್ನ ತಂದೆ ಹಾಗೂ ದೊಡ್ಡಪ್ಪಂದಿರರ ಹೆಸರು ವಾರಸಾ ನಾತೆ ಮೂಲಕ ನೇಮಕವಾಗಿದ್ದವು ಎಂದರೆ ಸರಿ. ದಾವಾ ಆಸ್ತಿಗಳ ಕುರಿತು ಕೆಲವೊಂದು ಆಸ್ತಿಗಳಲ್ಲಿ ಈಗಲೂ ಸಹ ಮೃತ ನನ್ನ ತಂದೆ ಹಾಗೂ ಮೃತ ದೊಡ್ಡಪ್ಪಂದಿರರ ಹೆಸರುಗಳು ಇರುತ್ತವೆ ಎಂದರೆ ಸರಿ. ಅದರಂತೆ ಕೆಲವೊಂದು ಆಸ್ತಿಗಳಲ್ಲಿ ವಾರಸಾ ಆಗಿರುತ್ತದೆ ಎಂದರೆ ಸರಿ. ಇಲ್ಲಿಯವರೆಗೂ ದಾವಾ ಆಸ್ತಿಗಳಲ್ಲಿ ಸರಸ ನಿರಸ ಪಾಲು ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ವಾದಿ, ಪ್ರತಿವಾದಿಯರು ಸಹಿ ಮಾಡಲು ಇಲ್ಲಿಯವರೆಗೆ ಬರದೇ ಇರುವ ಕಾರಣ ವಿಭಾಗವಾಗಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ವಾದಿ ಉಳಿದ ಪ್ರತಿವಾದಿಯರು ವಿಭಾಗ ಮಾಡಿಕೊಳ್ಳಲು ಒಪ್ಪಿಗೆ ನೀಡುತ್ತಿಲ್ಲ ಎಂದು ಕೋರಿಕೊಂಡು ನ್ಯಾಯಾಲಯದಲ್ಲಿ ಇಲ್ಲಿಯವರೆಗೆ ದಾವೆ ಸಲ್ಲಿಸಿರುವುದಿಲ್ಲ ಎಂದರೆ ಸರಿ.

3. ನಾನು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಉಳಿದ ನನ್ನ ಸಹೋದರ ಸಹೋದರಿಯರು ಪಾಲು ವಿಭಾಗ ಮಾಡಿಕೊಳ್ಳಲು ಸಹಿ ಮಾಡಲು ಬಂದಿರುವುದಿಲ್ಲ ಎಂದು ಬರೆಸಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತಿನ ದಾಖಲೆಗಳಲ್ಲಿ ನಮ್ಮ ಹೆಸರು ಹಾಗೂ ವಾದಿ, ಪ್ರತಿವಾದಿ ನಂ.1 ರಿಂದ 4 ರವರ ಹೆಸರುಗಳು ಇರುತ್ತವೆ ಎಂದರೆ ಸರಿ. ನಿಡಿ-1 ರ ದಾಖಲೆಯಲ್ಲಿ ಪ್ರತಿವಾದಿ ನಂ.2 ರವರ ಹೆಸರು ಇರುತ್ತದೆ ಎಂದರೆ ಸರಿ. ನಿಡಿ-1 ರ ದಾಖಲೆಯನ್ನು ವಾದಿ, ಪ್ರತಿವಾದಿ ನಂ.1, 3 ಮತ್ತು 4 ರವರು ಪ್ರತಿವಾದಿ ನಂ.2 ರವರಿಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ನಿಡಿ-1 ರ ದಾಖಲೆಯಲ್ಲಿ ನಮೂದಿಸಿರುವ ಬಸವಣ್ಣಿ ಬಾಳಪ್ಪ ಮದವಾಲ ಮತ್ತು ನಾವು ಸಂಬಂಧಿಕರು ಎಂದರೆ ಸರಿ. ಸದರಿ ಬಸವಣ್ಣಿ ಬಾಳಪ್ಪ

ಮದವಾಲರವರು ನಮ್ಮೂರಿನ ನಿವಾಸಿ ಎಂದರೆ ಸರಿ. ವಾದಿ, ಪ್ರತಿವಾದಿ ನಂ.1 ರಿಂದ 4ರವರ ತಂದೆ ಬಸವಣ್ಣೆರವರು ದುಡಿಯಲು ಗೋವಾಕ್ಕೆ ಹೋಗಿದ್ದರು ಎಂದರೆ ಸರಿ.

4. ಬಸವಣ್ಣೆ ಬಾಳಪ್ಪ ಮದವಾಲರವರು ನಮ್ಮ ಸಂಬಂಧಿಕರಾಗಿದ್ದರಿಂದ ನಾವು ನಿಡಿ-1ರಂತೆ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರ ಸರಿಯಲ್ಲ. ನಾವು ನಮ್ಮ ಅನುಕೂಲಕ್ಕೆ ತಕ್ಕ ಹಾಗೆ ನಿಡಿ-1ರ ದಾಖಲೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನಾವು ಮೌಖಿಕವಾಗಿ ಪಾಲು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಬಸವಣ್ಣೆ ಬಾಳಪ್ಪ ಮದವಾಲರವರಿಗೆ ನಿಡಿ-1ರ ದಾಖಲೆಯಲ್ಲಿ ಬರೆದ ಹಣವನ್ನು ಪ್ರತಿವಾದಿ ನಂ.2ರವರು ಮಾತ್ರ ಕೊಟ್ಟು ನಿಡಿ-1ರ ದಾಖಲೆಯನ್ನು ಪ್ರತಿವಾದಿ ನಂ.2ರವರು ಬಸವಣ್ಣೆ ಬಾಳಪ್ಪ ಮದವಾಲರವರ ಕಡೆಯಿಂದ ಪಡೆದುಕೊಂಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

ಬೆಳಗಿನ ನ್ಯಾಯಾಲಯದ ಸಮಯ ಮುಗಿದಿರುವುದರಿಂದ ಮಧ್ಯಾಹ್ನ 02.45 ಕ್ಕೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.

ದಿಃ **08-02-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ ಟಿ ಬಿ ರವರಿಂದಃ

5. ಪ್ರತಿವಾದಿ ನಂ.8 ಮತ್ತು 9 ರವರು ನನ್ನ ದೊಡ್ಡಪ್ಪ ಬಾಳಪ್ಪ ಇವರ ಪಾಲಿಗೆ ಬರುವ 1/3 ಅಂಶ ಹಿಸ್ಸೆ ಜಮೀನನ್ನು ಖರೀದಿ ಮಾಡಿರುತ್ತಾರೆ. ಗಡ್ಡಿಹೋಳಿ ಗ್ರಾಮದ ಸರ್ವೆ ನಂ.58 ರ 3 ಎಕರೆ 10 ಗುಂಟೆ ಪೈಕಿ 1/3 ಅಂಶ ಹಿಸ್ಸೆಯನ್ನು ಪ್ರತಿವಾದಿ ನಂ.8 ಮತ್ತು 9 ರವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿದಾರರ ಹೆಸರು ನಮ್ಮ ಹೆಸರಿನ ಜೊತೆಗೆ ದಾವಾ ಅನುಸೂಚಿ 4 ರ ಸ್ವತ್ತಿನ ಪಹಣಿ ಪತ್ರಿಕೆಗಳಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ.

6. ನಾನು ಖಾಯಂ ತರೀಖ ಉರುಬಿನಹಟ್ಟಿ ಗ್ರಾಮದಲ್ಲಿ ನನ್ನ ಹೆಂಡತಿ ಮಕ್ಕಳೊಂದಿಗೆ ವಾಸವಾಗಿರುತ್ತೇನೆ ಎಂದರೆ ಸರಿ. ವಾದಿ, ಪ್ರತಿವಾದಿ ನಂ.1 ರಿಂದ 4 ರವರ ತಾಯಿ ಗಂಗವ್ವ ರವರಿಗೆ ಕ್ಯಾನ್ಸರ್ ಆಗಿತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಗಂಗವ್ವರವರು ತಮ್ಮ ಮುಪ್ಪಾವಸ್ತೆಯಲ್ಲಿ ವಾದಿಯ ಜೊತೆಗೆ ವಾಸವಾಗಿದ್ದರು ಎಂದರೆ ಸಾಕ್ಷಿಯು ಪ್ರತಿವಾದಿ ನಂ.2 ರವರ ಬಳಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ದಾವಾ ಆಸ್ತಿಗಳಲ್ಲಿ ಇಲ್ಲಿಯವರೆಗೆ ನಮ್ಮ ತಂದೆಯ ಸಹೋದರರು ಮತ್ತು ನಮ್ಮ ತಂದೆಯ ನಡುವೆಯಾಗಲಿ ಅವರ ಮಕ್ಕಳು ಮತ್ತು ನಮ್ಮ ಮಧ್ಯೆಯಾಗಲಿ ದಾವಾ ಸ್ವತ್ತುಗಳಲ್ಲಿ ಸರಸ ನಿರಸ ಪಾಲು ವಿಭಾಗವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಮುಂದುವರೆದು ನನ್ನ ತಂದೆ ಮತ್ತು ಅವರ ಸಹೋದರರು ಜೀವಂತವಿರುವಾಗ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆಯ ಪಾಲಿಗೆ ಬಂದ ಜಮೀನುಗಳಲ್ಲಿ ನಾನು ಸ್ವಾದೀನಾನುಭವದಲ್ಲಿರುತ್ತೇನೆ. ನಮ್ಮ ತಂದೆಯ ಸಹೋದರರಿಗೆ ಬಂದ ಪಾಲುಗಳಲ್ಲಿ ಅವರ ಮಕ್ಕಳುಗಳು ಸ್ವಾದೀನಾನುಭವದಲ್ಲಿ ಇರುತ್ತಾರೆ. ಸಾಕ್ಷಿಯು ಸ್ವತಃ ಮುಂದುವರೆದು ಗಡ್ಡಿಹೊಳಿ ಗ್ರಾಮದ ಜಮೀನಿನ ಕುರಿತು ವಾದಿ, ಪ್ರತಿವಾದಿ ನಂ.1 ರಿಂದ 4 ರವರ ಮಧ್ಯೆ ವಿವಾದವಿರುತ್ತದೆ ಎಂದು ನುಡಿಯುತ್ತಾರೆ.

7. ದಾವಾ ಸ್ವತ್ತುಗಳ ಸರ್ವೆ ನಂಬರಗಳು ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತುಗಳಲ್ಲಿ ಜೋಳ, ಹತ್ತಿ, ತಂಬಾಕು ಬೆಳೆಗಳನ್ನು ಬೆಳೆಯುತ್ತೇವೆ. ಸದರಿ ಜಮೀನುಗಳಲ್ಲಿ ನಮ್ಮ ನಮ್ಮ ಜಮೀನುಗಳಿಗೆ ನಾವು ವ್ಯವಸಾಯ ಮಾಡುತ್ತೇವೆ. ನನ್ನ ದೊಡ್ಡಪ್ಪ ಬಸವಣ್ಣಿ ಇವರ ಮಕ್ಕಳ ಪಾಲಿಗೆ ಬಂದ ಜಮೀನುಗಳನ್ನು ವಾದಿ ಹಾಗೂ ಪ್ರತಿವಾದಿ ನಂ.1 ರಿಂದ 4 ರವರು ಜಂಟಿಯಾಗಿ ಸಾಗುವಳಿ ಮಾಡುತ್ತಾರೆ ಎಂದರೆ ಸಾಕ್ಷಿಯು ಅವರವರ ಜಮೀನುಗಳನ್ನು ಅವರವರು ಸಾಗು ಮಾಡುತ್ತಾರೆ ಎಂದು ನುಡಿದು ಪುನಃ ಸಾಕ್ಷಿಯು ಪ್ರತಿವಾದಿ ನಂ.2 ರವರು ವ್ಯವಸಾಯ ಮಾಡುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ ನಂ.2 ರವರು ಕಾಯಿಪಲ್ಯ ವ್ಯಾಪಾರ ಮಾಡಲು ಯಾವುದಾದರೂ ಪರವಾನಗೆ ಪಡೆದಿರುವ ದಾಖಲೆಗಳನ್ನು ನೀವು ನೋಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಕಾಯಿಪಲ್ಯ ಮಾರಲು ಪರವಾನಗೆ ಬೇಕಾಗಿರುವುದಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿ ನಂ.2 ರವರು ಎ ಪಿ ಎಂ ಸಿ ಕಡೆಯಿಂದ ಪರವಾನಗೆ ಏನಾದರೂ ಪಡೆದಿರುತ್ತಾನೆಯೇ ಎಂದರೆ ನನಗೆ ಗೊತ್ತಿಲ್ಲ.

8. ಈಗಲೂ ಸಹ ವಾದಿ ಹಾಗೂ ಪ್ರತಿವಾದಿ ನಂ.1 ರಿಂದ 7 ರವರು ದಾವಾ ಸ್ವತ್ತುಗಳ ಸಾಮೂಹಿಕ ಕಬ್ಜಾ ವಹಿವಾಟಿಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರ ದಾಖಲೆಯನ್ನು ನಾನು ಹಾಗೂ ಪ್ರತಿವಾದಿ ನಂ.2 ರವರು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ, ಪ್ರತಿವಾದಿ ನಂ.1, 3 ಮತ್ತು 4 ರವರು ಬಸವಣ್ಣಿ ಬಾಳಪ್ಪ ಮದವಾಲ ರವರ ಕಡೆಯಿಂದ ಯಾವುದೇ ಸಾಲ ಪಡೆದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಾದಿ, ಪ್ರತಿವಾದಿ ನಂ.1, 3 ಮತ್ತು 4 ರವರು ನಿಡಿ-1 ರ ದಾಖಲೆಯನ್ನು ಬಸವಣ್ಣಿ ಬಾಳಪ್ಪ ಮದವಾಲ ರವರಿಗೆ ಬರೆದುಕೊಟ್ಟಿರಲಿಲ್ಲ ಎಂದರೆ ಸಾಕ್ಷಿಯು ಸದರಿಯವರು ನಿಡಿ-1 ರ ದಾಖಲೆಯಲ್ಲಿನ ಜಮೀನನ್ನು ಬಸವಣ್ಣಿ ಬಾಳಪ್ಪ ಮದವಾಲ ರವರಿಗೆ ಮಾರಾಟ ಮಾಡಿದ್ದರು ಅವರ ಕಡೆಯಿಂದ ಪ್ರತಿವಾದಿ ನಂ.2 ರವರು ಬಸವಣ್ಣಿ ಬಾಳಪ್ಪ ಮದವಾಲ ರವರಿಗೆ ಹಣ ನೀಡಿ ಜಮೀನನ್ನು ಮರಳಿ ಪಡೆದಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿ ನಂ.2 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ರ ದಾಖಲೆಯನ್ನು ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿವಾದಿ ನಂ.**1, 3** ಮತ್ತು **4** ರವರ ಪರ ವಕೀಲರಿಂದಃ

ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.